ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ವಿಶೇಷ ಆಯುಕ್ತರು (ಯೋಜನೆ) ರವರ ಕಛೇರಿ, ಪಾಲಿಕೆಯ ಮುಖ್ಯ ಕಛೇರಿಗಳು
ನರಸಿಂಹರಾಜ ಚೌಕ, ಬೆಂಗಳೂರು-560 002

ಸಂಖ್ಯೆ: ವಿ(ಯೋ)/ಟೆಂಡರ್/ಕ್ಷಗಳ/16-17 ದಿನಾಂಕ: 18.10.16

ಆದ್ಯತಾ ವೇಗ

ಎಲ್ಲಾ ಮುಖ್ಯ ಅಭಿಯಂತರರು (ಪೂರ್ವ, ಪಶ್ಚಿಮ, ದಕ್ಷಿಣ, ಮಹದೇವಪುರ, ರಾಜರಾಜೇಶ್ವರಿ ನಗರ, ಯಲಹಂಕ, ದಾಸರಹಳ್ಳಿ, ಬೊಮ್ಮನಹಳ್ಳಿ ವಲಯಗಳು, ರಸ್ತೆ ಮೂಲಭೂತ ಸೌಕರ್ಯ)

ಆಂತರಿಕ ಕಛೇರಿ ಟಿಪ್ಪಣಿ

ವಿಷಯ: ವಾರ್ಷಿಕವಾಗಿ ವಾರ್ಡ್‌ವಾರು ನಿಗದಿಪಡಿಸಿರುವ ನಿರ್ವಹಣಾ ಅವಧಿಯಲ್ಲಿ ಪೂರ್ಣ ಮೊತ್ತದಲ್ಲಿ ತುರ್ತು ಕಾಮಗಾರಿಗಳನ್ನು ಕೈಗೊಳ್ಳಲು ಕ.ಟ.ಪ್ರ.ಕಾಯ್ದೆ 4(ಜ) ರಡಿ ವಿನಾಯಿತಿ ನೀಡಲು ಕೋರಿರುವ ಬಗ್ಗೆ.

ಉಲ್ಲೇಖ: 1. ಪಾಲಿಕೆಯ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಸಭೆಯ ದಿ:13-07-2016 ರ ನಡುವಳಿಕೆಯನ್ವಯ

2. ಮಾನ್ಯ ಆಯುಕ್ತರವರ ಪತ್ರ ಸಂಖ್ಯೆ:3393/2016-17, ದಿ:04-08-2016

3. ಸರ್ಕಾರದ ಅಧೀನ ಕಾರ್ಯದರ್ಶಿಯ ಪತ್ರ ಸಂಖ್ಯೆ: ಯುಡಿ/340/ಪಜೆ-1/2016, ದಿ:03-10-2016

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (2) ರಲ್ಲಿ ಪಾಲಿಕೆಯ ವ್ಯಾಪ್ತಿಗೆ ಬರುವ ಕೆಲವು ಅದೇಶಗಳಲ್ಲಿ ಇತ್ತೀಚಿಗೆ ಸುರಿದ ಭಾರಿ ಮಳೆಯಿಂದಾಗಿ ರಸ್ತೆಗಳು ಹಾಳಾಗಿರುವ ಕಾರಣದಿಂದ 2016-17 ನೇ ಸಾಲಿನ ಆಯವ್ಯದಲ್ಲಿ ಲೆಕ್ಕ ಶೀರ್ಷಿಕೆ ಪಿ-1771 ರ ಅಡಿಯಲ್ಲಿ ವಲಯ ಕಾಮಗಾರಿ- ವಾರ್ಡ್‌ವಾರು ನಿರ್ವಹಣೆಗೆ ಪ್ರತಿ ವಾರ್ಡ್‌ಗಳಿಗೆ ತಲಾ ರೂ.2.00 ಕೋಟಿ ಹಾಗೂ ಕ್ಲೂಸ್ ವಾರ್ಡ್‌ಗಳಿಗೆ ತಲಾ ರೂ.3.00 ಕೋಟಿ ಮೊತ್ತವನ್ನು ಮೀಸಲಿರಿಸಿದ್ದು ಇದರ ಪೈಕಿ ರೂ.10.00 ಲಕ್ಷ ಮೊತ್ತವನ್ನು ತುರ್ತು ಕಾಮಗಾರಿಗಳಿಗೆ ಉಪಯೋಗಿಸಲು ಅವಕಾಶ ಕಲ್ಪಿಸಲಾಗಿದ್ದು ಈ ಮೊತ್ತದಲ್ಲಿ ರಸ್ತೆ ದುರಸ್ತಿ (ರಸ್ತೆ ಗುಂಡಿಗಳ ಮುಚ್ಚುವಿಕೆ, ಮೋರಿಗಳಲ್ಲಿ ಹೂಳು ತೆಗೆಯುವುದು, ರಸ್ತೆ ಅಗೆತದ ಮುಚ್ಚುವಿಕೆ, ಇತ್ಯಾದಿ) ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಲು ಕ.ಟ.ಪ್ರ.ಕಾಯ್ದೆಯ 4(ಜ) ರ ಅಡಿ ಅಗತ್ಯ ವಿನಾಯಿತಿಯನ್ನು ನೀಡಲಾಗಿದ್ದು, ಈ ವಿಷಯದಲ್ಲಿ ಈ ಕೆಳಕಂಡ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಕಾರ್ಯಗಳನ್ನು ಪೂರ್ಣಗೊಳಿಸಲು ಆದೇಶಿಸಿದೆ.

1. ರಸ್ತೆಗಳಲ್ಲಿ defects liability period ಚಾಲ್ತಿಯಲ್ಲಿರುವುದಕ್ಕೆ ಕರಾರು ಪತ್ರದಂತೆ ಸಂಬಂಧಪಟ್ಟ ಗುತ್ತಿಗೆದಾರರಿಂದಲೇ ಕಾರ್ಯಗಳನ್ನು ನಿರ್ವಹಿಸಬೇಕಾಗಿರುತ್ತದೆ.
2. ಸ್ವಷ್ಟಿ ಕಾರ್ಯಗಳನ್ನು ಷರತ್ತು (1) ರಲ್ಲಿ ಸೂಕ್ತವಾಗಿ ಪಾಲಿಸಿ ಯಾವುದೇ ಉಲ್ಲಂಘನೆ ಆಗದಂತೆ ಕ್ರಮವಹಿಸಬೇಕಾಗಿರುತ್ತದೆ.
3. ಕಾರ್ಯಗಳನ್ನು ಕೈಗೊಳ್ಳುವ ಮುನ್ನ ರಸ್ತೆಗಳನ್ನು ಗುರುತಿಸಿಕೊಂಡು ಪ್ರಾರಂಭವಾಗುವ ಮುನ್ನ, ನಡೆಯುವಾಗ ಮತ್ತು ಪೂರ್ಣಗೊಂಡ ನಂತರ ಛಾಯ ಚಿತ್ರಗಳನ್ನು (GIS mapping with date) ತಗದು ಪ್ರಧಾನ ಅಭಿಯಂತರರವರಿಗೆ ಸಲ್ಲಿಸಬೇಕಾಗಿರುತ್ತದೆ.
4. ಈ ಕಾರ್ಯಗಳನ್ನು ವಲಯದಲ್ಲಿರುವ ಎಲ್ಲಾ ರಸ್ತೆಗಳಲ್ಲಿ- ರಸ್ತೆ ಗುಂಡಿಗಳ ಮುಚ್ಚುವಿಕೆ, ಮೋರಿಗಳಲ್ಲಿ ಹೂಳು ತೆಗೆಯುವುದು, ರಸ್ತೆ ಅಗೆತದ ಮುಚ್ಚುವಿಕೆ, ಇತ್ಯಾದಿಗಳನ್ನು ಪೂರ್ಣಪ್ರಮಾಣದಲ್ಲಿ ತುರ್ತಾಗಿ ಹಾಗೂ ನಿಯಮಾನುಸಾರ ಕಡ್ಡಾಯವಾಗಿ ಕೈಗೊಳ್ಳಬೇಕಾಗಿರುತ್ತದೆ.

ಮೇಲ್ಕಾಣಿಸಿದ ಷರತ್ತುಗಳನ್ನು ಪಾಲಿಸದೇ ಇದ್ದ ಅಧಿಕಾರಿಗಳ ಮೇಲೆ ಸಕ್ಷಮ ಪ್ರಾಧಿಕಾರವು ಶಿಸ್ತಿನ ಕ್ರಮವನ್ನು ಜರುಗಿಸಲಾಗುವುದೆಂದು ಸೂಚನೆ ನೀಡಿದೆ.

21 OCT 2016

ವಿಶೇಷ ಆಯುಕ್ತರು (ಯೋಜನೆ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು

1. ಮಾನ್ಯ ಆಯುಕ್ತರವರ ಮಾಹಿತಿಗಾಗಿ ಸಲ್ಲಿಸಿದೆ.
2. ಪ್ರಧಾನ ಅಭಿಯಂತರರು, ರವರಿಗೆ ಮಾಹಿತಿಗಾಗಿ.